# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 219 |
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ |
| ಉತ್ತರಿಸುವ ದಿನಾಂಕ | 14-09-2022 |
| ಉತ್ತರಿಸುವವರು | ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ಹೊರಗಿನ ಪ್ರದೇಶದಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ದೇವಸ್ಥಾನಗಳು/ ವಸತಿ ನಿಲಯಗಳು /ಛತ್ರಗಳು ಎಷ್ಟು? ಅವು ಎಲ್ಲಿವೆ? ಅವುಗಳ ವಿಸ್ತೀರ್ಣವೆಷ್ಟು? ಅಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು) | ➢ ಕರ್ನಾಟಕ ರಾಜ್ಯದ ಹೊರಗಿನ ಪ್ರದೇಶದಲ್ಲಿ ಕರ್ನಾಟಕ ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೊಳಪಡುವ ದೇವಸ್ಥಾನಗಳು ಯಾವುದೂ ಇರುವುದಿಲ್ಲ.<br>➢ ಹೊರ ರಾಜ್ಯ ಗಳಲ್ಲಿರುವ ಕರ್ನಾಟಕ ರಾಜ್ಯದ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೊಳಪಡುವ ಕರ್ನಾಟಕ ರಾಜ್ಯ ಛತ್ರ/ವಸತಿ ನಿಲಯಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಕರ್ನಾಟಕ ರಾಜ್ಯದ ಹೊರಗಿನ ಪ್ರದೇಶದಲ್ಲಿ ಮುಜರಾಯಿ ಇಲಾಖೆಯ ಈ ದೇವಸ್ಥಾನಗಳು/ವಸತಿ ನಿಲಯಗಳು /ಛತ್ರಗಳನ್ನು ಯಾವಾಗ, ಯಾರಿಂದ ಸ್ಥಾಪಿಸಲಾಯಿತು; ಅದರ ಉದ್ದೇಶಗಳೇನು; ಇವುಗಳಲ್ಲಿ ರಾಜ್ಯದ ಯಾತ್ರಿಕರಿಗೆ ಈಗ ನೀಡುತ್ತಿರುವ ಸೇವೆಗಳು/ಸೌಲಭ್ಯಗಳೇನು? (ವಿವರ ನೀಡುವುದು) | ಹೊರ ರಾಜ್ಯದಗಳಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ಕರ್ನಾಟಕ ರಾಜ್ಯ ಛತ್ರ/ವಸತಿ ನಿಲಯಗಳ ಸ್ಥಾಪಿತ, ಉದ್ದೇಶ, ಸೇವೆಗಳ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

ಸಂಖ್ಯೆ: ಕಂಇ 154 ಮುಸಪ್ರ 2022

**(ಶಶಿಕಲಾ. ಅ. ಜೊಲ್ಲೆ)**
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

## ಅನುಬಂಧ - 1

**ಹೊರ ರಾಜ್ಯಗಳಲ್ಲಿರುವ ಕರ್ನಾಟಕ ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೊಳಪಡುವ ಕರ್ನಾಟಕ ರಾಜ್ಯ ಛತ್ರ/ವಸತಿ ನಿಲಯಗಳ ಅಲ್ಲಿನ ಸಿಬ್ಬಂದಿಗಳ ವಿವರ**

| ರಾಜ್ಯ | ಶ್ರೀಕ್ಷೇತ್ರ | ವಿಸ್ತೀರ್ಣ | ಅಧಿಕಾರಿ ಮತ್ತು ಸಿಬ್ಬಂದಿಗಳ ಒಟ್ಟು ಸಂಖ್ಯೆ | ಷರಾ |
|---|---|---|---|---|
| ಆಂಧ್ರಪ್ರದೇಶ | ತಿರುಮಲ | 7 ಎಕರೆ 05 ಸೆಂಟ್ಸ್ | 47 | ತಿರುಮಲ ಮತ್ತು ತಿರುಚಾನೂರು ಕರ್ನಾಟಕ ರಾಜ್ಯ ಛತ್ರದ ಛತ್ರದ ಒಟ್ಟು ಸಿಬ್ಬಂದಿಗಳು |
| | ತಿರುಚಾನೂರು | 15246 ಚ.ಅಡಿ | | |
| | ಮಂತ್ರಾಲಯ | 04 ಎಕರೆ 12 ಗುಂಟೆ | 13 | - |
| | ಶ್ರೀಶೈಲಂ | 91623.93 ಚ.ಅಡಿ | 05 | - |
| ಮಹಾರಾಷ್ಟ್ರ | ತುಳಜಾಪುರ | 3752 ಚ.ಮೀಟರ್ (ವಹಿವಾಟಿನ ಪ್ರಕಾರ) | 04 | ನಿಯೋಜನೆ ಮೇರೆಗೆ ಒಬ್ಬ ಪ್ರ.ದ.ಸ. ಮತ್ತು ಹೊರಗುತ್ತಿಗೆ ಮೇಲೆ 2 ಭದ್ರತಾ ಸಿಬ್ಬಂದಿ ಮತ್ತು ಒಂದು ಸ್ವಚ್ಛತಾ ಸಿಬ್ಬಂದಿ |
| ಉತ್ತರ ಪ್ರದೇಶ | ವಾರಣಾಸಿ | 16969.304 ಚ.ಅಡಿ | 05 | - |

(signature)
ಆಯುಕ್ತರ ಪರವಾಗಿ
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು

ಅನುಬಂಧ - 2

ಹೊರ ರಾಜ್ಯಗಳಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ಕರ್ನಾಟಕ ರಾಜ್ಯ ಛತ್ರ/ವಸತಿ ನಿಲಯಗಳ ಸ್ಥಾಪಿತ, ಉದ್ದೇಶ, ಸೇವೆಗಳ ವಿವರ

**ಆಂಧ್ರಪ್ರದೇಶ- ತಿರುಮಲ :**

ತಿರುಮಲದ ಕರ್ನಾಟಕ ರಾಜ್ಯ ಛತ್ರದ ಆಸ್ತಿಗಳನ್ನು ಸೆಕ್ರೆಟರಿ ಕೌನ್ಸಿಲ್ ಆಫ್ ಮದ್ರಾಸ್ ಇವರಿಂದ ಮ್ಯಾನೇಜರ್, ಮೈಸೂರು ಮಹಾರಾಜ ಇವರಿಗೆ ದೃಢೀಕರಿಸಿ ನೀಡಿದ್ದು, ಕರ್ನಾಟಕ ರಾಜ್ಯದ (ಹಿಂದಿನ ಮೈಸೂರು ರಾಜ್ಯದ ವಶದಲ್ಲಿದ್ದು) ರಾಜರ ಆಳ್ವಿಕೆ ಅಂತ್ಯಗೊಂಡ ನಂತರ, ಹಿಂದಿನ ಮೈಸೂರು ಸರ್ಕಾರದ ವ್ಯಾಪ್ತಿಗೆ ಸೇರ್ಪಡೆಗೊಂಡಿರುತ್ತದೆ. ಪ್ರಸ್ತುತ, ಕರ್ನಾಟಕ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸದರಿ ಛತ್ರವನ್ನು ಕರ್ನಾಟಕ ರಾಜ್ಯದಿಂದ ತೆರಳುವ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆಯನ್ನುಕಲ್ಪಿಸುವ ಉದ್ಧೇಶವಾಗಿದ್ದು, ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯವನ್ನು (ಕುಡಿಯುವ ನೀರು, ಶೌಚಾಲಯ, ವಸತಿ) ಒಳಗೊಂಡ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

**ಆಂಧ್ರಪ್ರದೇಶ- ತಿರುಚಾನೂರು :**

ತಿರುಚಾನೂರು ಕರ್ನಾಟಕ ರಾಜ್ಯ ಛತ್ರವನ್ನು ಹೊಸದಾಗಿ ಕರ್ನಾಟಕ ರಾಜ್ಯ ಸರ್ಕಾರದಿಂದ ನಿರ್ಮಿಸಲಾಗಿದ್ದು, ಸದರಿ ಕಟ್ಟಡವನ್ನು ದಿನಾಂಕ:24.01.2013 ರಂದು ಉದ್ಘಾಟನೆ ಯಾಗಿರುತ್ತದೆ.

ಸದರಿ ಛತ್ರವನ್ನು ಕರ್ನಾಟಕ ರಾಜ್ಯದಿಂದ ತೆರಳುವ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆಯನ್ನುಕಲ್ಪಿಸುವ ಉದ್ದೇಶವಾಗಿದ್ದು, ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯವನ್ನು (ಕುಡಿಯುವ ನೀರು, ಶೌಚಾಲಯ, ವಸತಿ) ಒಳಗೊಂಡ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

**ಆಂಧ್ರಪ್ರದೇಶ-ಮಂತ್ರಾಲಯ :**

ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರವನ್ನು ಶ್ರೀ ವಿಠಲ್ ರಾವ್, ಮಾನ್ಯ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು ರವರ ಅವಧಿಯಲ್ಲಿ ದಿನಾಂಕ:25-11-1984 ರಂದು ಸ್ಥಾಪಿಸಲಾಗಿರುತ್ತದೆ.

ಸದರಿ ಛತ್ರವನ್ನು ಕರ್ನಾಟಕ ರಾಜ್ಯದಿಂದ ತೆರಳುವ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆಯನ್ನುಕಲ್ಪಿಸುವ ಉದ್ದೇಶವಾಗಿದ್ದು ಸದರಿ ಛತ್ರವನ್ನು ಮಂತ್ರಾಲಯ ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯವನ್ನು (ಕುಡಿಯುವ ನೀರು, ಶೌಚಾಲಯ, ವಸತಿ) ಒಳಗೊಂಡ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

**ಶ್ರೀಶೈಲಂ :**

ಸದರಿ ಛತ್ರವನ್ನು ಕರ್ನಾಟಕ ರಾಜ್ಯದಿಂದ ತೆರಳುವ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆಯನ್ನುಕಲ್ಪಿಸುವ ಉದ್ದೇಶವಾಗಿದ್ದು ಶ್ರೀಶೈಲಂ ಕರ್ನಾಟಕ ರಾಜ್ಯ ಛತ್ರವನ್ನು 1969ರಲ್ಲಿ ಮೈಸೂರು ಸರ್ಕಾರದ ವತಿಯಿಂದ ಸ್ಥಾಪಿಸಲಾಗಿರುತ್ತದೆ.

ಸದರಿ ಛತ್ರವನ್ನು ಶ್ರೀಕ್ಷೇತ್ರ ಶ್ರೀಶೈಲಂಗೆ ಆಗಮಿಸುವ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯವನ್ನು (ಕುಡಿಯುವ ನೀರು, ಶೌಚಾಲಯ, ವಸತಿ) ಒಳಗೊಂಡ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

--2

<u>ಮಹಾರಾಷ್ಟ್ರ- ತುಳಜಾಪುರ</u> :

ಮಹಾರಾಷ್ಟ್ರ ರಾಜ್ಯದ ತುಳಜಾಪುರ ಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ಹೊಸದಾಗಿ ನಿರ್ಮಿಸಿದ್ದು, ದಿನಾಂಕ:15.12.2016 ರಂದು ಉದ್ಘಾಟಿಸಲಾಗಿರುತ್ತದೆ.

ಸದರಿ ಛತ್ರವನ್ನು ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯವನ್ನು (ಕುಡಿಯುವ ನೀರು, ಶೌಚಾಲಯ, ವಸತಿ) ಒಳಗೊಂಡ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

<u>ಉತ್ತರ ಪ್ರದೇಶ ವಾರಣಾಸಿ</u> :

ವಾರಣಾಸಿಯ ಕರ್ನಾಟಕ ರಾಜ್ಯ ಛತ್ರವನ್ನು ಅಂದಿನ **ಮೈಸೂರು ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್** ರವರಿಂದ 1928 ರಲ್ಲಿ ಸ್ಥಾಪಿಸಲಾಗಿರುತ್ತದೆ.

ಸದರಿ ಛತ್ರವನ್ನು ಕರ್ನಾಟಕ ರಾಜ್ಯದಿಂದ ಕಾಶಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆ ಹಾಗೂ ಊಟೋಪಚಾರದ ವ್ಯವಸ್ಥೆ ಕಲ್ಪಿಸುವುದಾಗಿತ್ತು. ಪ್ರಸ್ತುತ, ಯಾತ್ರಾರ್ಥಿಗಳಿಗೆ ಮೂಲಭೂತ ಸೌಲಭ್ಯವನ್ನು (ಕುಡಿಯುವ ನೀರು, ಶೌಚಾಲಯ, ವಸತಿ) ಒಳಗೊಂಡ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಆಯುಕ್ತರ ಪರವಾಗಿ
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು